ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮುಖ್ಯಮಂತ್ರಿಗಳು ಹಣವನ್ನು ಕೊಟ್ಟರೆ ನಮ್ಮ ಆಭ್ಯಂತರವಿಲ್ಲ. ಅನೇಕ ಕಡೆ ಇಂಥ ಬೇಡಿಕೆ ಬಂದಿದೆ. ಇಂಥ ಸಂದರ್ಭದಲ್ಲಿ ಹೆಚ್ಚು ಸಹಾಯ ಮಾಡಲಿಕ್ಕೆ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇವೆ. ಏತಕ್ಕೆಂದರೆ ಪರಿಹಾರ ಕೊಡುವಾಗ ಅವರಿಂದ ಧನ ಸಹಾಯವೂ ಬೇಕಾಗುತ್ತದೆ. ಸಾಕಷ್ಟು ಅನುಕೂಲವಾಗುವಂಥ ರೀತಿಯಲ್ಲಿ ಸಹಾಯ ಮಾಡೋಣವೆಂದು ಮಾಡುತ್ತಿದ್ದೇವೆ. ರೈತರು ಬೆಳೆದಂಥ ಬೆಳೆ, ಭೂಮಿ ಕೊಚ್ಚಿ ಹೋಗಿದ್ದರೆ ಅಲ್ಲಿ ಯಾವರೀತಿ ಸಹಾಯ ಮಾಡಬೇಕು ಎನ್ನುವ ಬಗ್ಗೆ ಸಾಯಿಲ್ ಕನ್ಸರ್‌ವೇಷನ್ ಡಿಪಾರ್ಟ್‌ಮೆಂಟ್ ನವರನ್ನು ಕೇಳಿ ಅವರಿಗೆ ಯಾವರೀತಿ ಸಹಾಯ ಮಾಡಬೇಕು ಎನ್ನುವುದನ್ನು ವಿಚಾರ ಮಾಡಿ, ಎನ್.ಆರ್.ಇ.ಪಿ., ಆರ್.ಎಲ್.ಇ.ಜಿ.ಪಿ, ಡಿ.ಪಿ.ಎ.ಪಿ. ಇವುಗಳ ಮುಖಾಂತರವೂ ಕೂಡ ಸಹಾಯ ಮಾಡಲು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಯಂ. ಭೂಪತಿ.—ಮಾನ್ಯ ಅಧ್ಯಕ್ಷರೇ ನಾನು ಏತಕ್ಕೆ ಒತ್ತಾಯ ಮಾಡುತ್ತಿದ್ದೇನೆಂದರೆ ಬಳ್ಳಾರಿ ಜಿಲ್ಲೆ ಪ್ರತಿ ವರ್ಷ ಪ್ರಕೃತಿಯ ವಿಕೋಪಕ್ಕೆ ತುತ್ತಾಗುತ್ತಲೇ ಇರುತ್ತದೆ. ೧೯೫೫ನೇ ಇಸವಿಯಲ್ಲಿ ಭಾರೀ ಮಳೆ ಬಂದ ಕಾರಣದಿಂದಾಗಿ ೧೯ ಜನರು ಕೊಟ್ಟಿ ಹೋಗಿ ಸ್ಪಾಟ್ ಡೆತ್ ಆಗಿದೆ. ೧೯ ಜನರ ಒಂದೊಂದು ಕುಟುಂಬಕ್ಕೆ ಸರ್ಕಾರ ಪರಿಹಾರ ಧನವೆಂದು ಐದು ಸಾವಿರ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಬೇರೆ ಏನೂ ಸಹಾಯವನ್ನು ಕೊಟ್ಟಿಲ್ಲ. ಇಷ್ಟಿಗೆ ಜನತಾ ಮನೆಗಳನ್ನು ಸಹ ಕೊಟ್ಟಿಲ್ಲ. ಪರಿಹಾರವನ್ನು ಕೊಡಲು ಕೇಂದ್ರ ಸರ್ಕಾರದ ಮೇಲೆ ಹೇಳಿದರೆ ಹೇಗೆ ಸಾಧ್ಯವಾಗುತ್ತದೆ. ರಾಜ್ಯದಲ್ಲಿ ಎಲ್ಲಿ ಭಾರಿ ನಷ್ಟಕ್ಕೆ ರೈತರು ಒಳಗಾಗಿರುತ್ತಾರೆ ಅಂಥ ಕಡೆ ರೈತರಿಗೆ ಕೊಟ್ಟಿರತಕ್ಕಂಥ ಸಾಲವನ್ನಾದರೂ ಮನ್ನಾ ಮಾಡುತ್ತೀರಾ ಎಂದು ಕೇಳುತ್ತೇನೆ ಇಷ್ಟೆಂದು ಕೊಂದರೆಗೆ ಈಡಾಗಿರತಕ್ಕಂಥ ರೈತರನ್ನು ಸಾಲ ಕಟ್ಟಬೇಕೆಂದು ಕೇಳಿದರೆ ಅವರು ಯಾವ ರೀತಿ ಸಾಲ ಕಟ್ಟಲು ಸಾಧ್ಯವಾಗುತ್ತದೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಹುಣಸೂರಿನಲ್ಲಿ ಮಳೆಯ ಪರಿಣಾಮವಾಗಿ ಒಂದು ಬಸ್ ಕೊಚ್ಚಿಹೋಯಿತು. ನಾನು ಹೇಳುವುದು ಪರಿಹಾರವನ್ನು ಕೊಡಬಾರದೆಂದು ಹೇಳುತ್ತಿಲ್ಲ, ರೈತರಿಗೆ ಕೊಟ್ಟಿರತಕ್ಕಂಥ ಸಾಲವನ್ನು ಮನ್ನಾ ಮಾಡಿ ಎಂದು ಹೇಳುತ್ತಿದ್ದೀರಿ. ಪರಿಶೀಲನೆ ಮಾಡುತ್ತೇನೆ.

ದಿದನ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ರೆವಿನ್ಯೂ ಗ್ರಾಮ ಸಹಾಯಕರುಗಳಿಗೆ ವೇತನ

೯೧೨. ಶ್ರೀ ಜಿ. ಎಸ್. ಶಿವನಂಜಪ್ಪ (ಹಟ್ಟಿ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರದಲ್ಲಿ ಕೆಲಸ ಮಾಡುತ್ತಿರುವ ರೆವಿನ್ಯೂ ಗ್ರಾಮ ಸಹಾಯಕರುಗಳಿಗೆ ವೇತನ ಕೊಡಲು ನಿಗದಿಪಡಿಸಲು ತೀರ್ಮಾನಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ ಎಷ್ಟು ವರ್ಷಗಳಿಂದ ವೇತನ ಕೊಟ್ಟಿರುವುದಿಲ್ಲ ಹಾಗೂ ಯಾವಾಗ ವೇತನವನ್ನು ಪಾವತಿ ಮಾಡಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು) —

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.